ಮಹಾನಿರ್ದೇಶಕರು; ಇವರ ನೇತೃತ್ವದಲ್ಲಿ ಸ್ಟಾಂಪ್ ಇನ್‌ವೆಸ್ಟಿಗೇಷನ್ ಟೀಮ್ ಎಂಬ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ.

ಸ್ಟಾಂಪಿಟ್ ಮೂರು ಪ್ರಕರಣಗಳಲ್ಲಿ ತನಿಖೆ ನಡೆಸುತ್ತಿದೆ. ಈ ಮೂರು ಪ್ರಕರಣಗಳಲ್ಲಿ 9 ದೋಷಾ ರೋಪಣಾ ಪಟ್ಟಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ವಿಚಾರಣೆ ಬಾಕಿ ಇರುತ್ತದೆ. ಈ ಎಲ್ಲಾ ಪ್ರಕರಣಗಳಲ್ಲಿ ಅಪರಾಧ ದಂಡ ಪ್ರಕ್ರಿಯೆ ಕಲಂ 173 (8)ರ ಅಡಿಯಲ್ಲಿ ತನಿಖೆಯನ್ನು ಮುಂದುವರೆಸಲಾಗಿದೆ.

11 ಜಿಲ್ಲೆಗೆ ಸಂಬಂಧಿಸಿದ ಇತರೆ 11 ಪ್ರಕರಣಗಳನ್ನು ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ. ಇದರಲ್ಲಿ ಒಂದು ಪ್ರಕರಣವು ಖುಲಾಸೆಯಲ್ಲಿ ಅಂತ್ಯಗೊಂಡಿರುತ್ತದೆ, 8 ಪ್ರಕರಣಗಳಲ್ಲಿ ವಿಚಾರಣೆ ಬಾಕಿ ಇರುತ್ತದೆ, 2 ಪ್ರಕರಣಗಳು ತನಿಖೆಯಲ್ಲಿರುತ್ತವೆ.

ಇ) ಇಲ್ಲ

ಈ) ಬೆಂಗಳೂರಿನಲ್ಲಿ ಒಂದು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ ಮತ್ತು ವಿಚಾರಣೆ ಪ್ರಾರಂಭಿಸಲು ಒಬ್ಬ ವಿಶೇಷ ನ್ಯಾಯಾಧೀಶರನ್ನು ನಾಮ ನಿರ್ದೇಶಿಸಲು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಕೋರಲಾಗಿದೆ.

ಉ) ಇಲ್ಲ, ಉದ್ಭವಿಸುವುದಿಲ್ಲ.

ಊ) ಮೇಲಿನ ಈ ಅಂಕಣದಲ್ಲಿ ನೀಡಿರುವ ಉತ್ತರವನ್ನು ನೋಡಿ.

ವಿವಿಧ ನ್ಯಾಯಾಲಯಗಳಲ್ಲಿ 11 ಪ್ರಕರಣಗಳು ಈಗಾಗಲೇ ವಿಚಾರಣಾ ಬಾಕಿ ಹಂತದಲ್ಲಿರುತ್ತವೆ.

ಅಧಿಕಾರಿಗಳು ಜನಪ್ರತಿನಿಧಿಗಳ ಜೊತೆ ಅನುಚಿತವಾಗಿ ವರ್ತಿಸಿರುವುದು

2650 (2765) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ) ಮಾನ್ಯ ಮುಖ್ಯ ಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಅಧಿಕಾರಿಗಳು ಜನಪ್ರತಿನಿಧಿಗಳೊಂದಿಗೆ ಅನುಚಿತವಾಗಿ ವರ್ತಿಸಿದರೆಂದು ಸಂಸತ್ ಸದಸ್ಯರು, ಶಾಸಕರು, ಸ್ಥಳೀಯ ಸಂಸ್ಥೆಯ ಜನಪ್ರತಿನಿಧಿಗಳು ದೂರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ದೂರುಗಳ ಸ್ವರೂಪ ಏನು; ಯಾವ ದಿನಾಂಕಗಳಂದು ದೂರು ನೀಡಿರುವರು; ವಿವರ ನೀಡುವುದು;

ಇ) ಜನಪ್ರತಿನಿಧಿಗಳು ದೂರು ನೀಡಿದ ದಿನಾಂಕದಿಂದ ಇಂದಿನವರೆಗೆ ಸರ್ಕಾರವು ಕೈಗೊಂಡ ಕ್ರಮವೇನು;

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯ ಮಂತ್ರಿಗಳು):

ಅ) ಹೌದು

ಆ) 1. ಭಟ್ಕಳ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಯಾಗಿದ್ದ ಶ್ರೀ ಶಂಕರ ಖಾರ್ವಿಯವರು ಸ್ಥಳೀಯ ಶಾಸಕರೊಡನೆ ಸೌಜನ್ಯದಿಂದ ಮಾತನಾಡದಿರುವುದಾಗಿ ದಿನಾಂಕ: 5.12.2001ರ ಪತ್ರದಲ್ಲಿ ಆಪಾದಿಸಿದೆ.

2. ಜಿಲ್ಲಾ ಪಂಚಾಯತ್‌ನ ಮಹಿಳಾ ಉಪಾಧ್ಯಕ್ಷೆಯವರನ್ನು ಬಿಜಾಪುರ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾಗಿದ್ದ ಶ್ರೀ ಕೆ. ಜೋಸೆಫ್‌ರವರು ಏಕವಚನದಲ್ಲಿ ಸಂಭೋದಿಸಿರುವುದಾಗಿ ದಿನಾಂಕ: 08.01.2001 ರಂದು ದೂರಲಾಗಿದೆ.

3. ದಿನಾಂಕ: 6.9.2002 ರಂದು ಚಿಕ್ಕಮಗಳೂರು ಜಿಲ್ಲೆ ಪ್ರಭಾರ ಉಪ ನಿರ್ದೇಶಕರು ಶಾಸಕರೊಡನೆ ಅನುಚಿತವಾಗಿ ವರ್ತಿಸಿ ಶಿಷ್ಟಾಚಾರ ಪಾಲಿಸಿಲ್ಲವೆಂದು ಚಿಕ್ಕಮಗಳೂರು ಶಾಸಕರು ದೂರಿದ್ದಾರೆ.

4. ದಿನಾಂಕ: 4.4.2003 ರಂದು ಇಂಡಿ ಮತ ಕ್ಷೇತ್ರದ ಶಾಸಕರಾದ ಶ್ರೀ ರವಿಕಾಂತ್ ಪಟೇಲ್ ರವರು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಹೇಳಿಕೆ ನೀಡಿ, ದೂಳಖೇಡ ತನಿಖಾ ಠಾಣೆಗೆ ಭೇಟಿ ನೀಡಿದಾಗ ಕರ್ತವ್ಯದ ಮೇಲಿದ್ದ ಅಧಿಕಾರಿಗಳು ಅಸಭ್ಯವಾಗಿ ವರ್ತಿಸಿದರೆಂದು, ತನಿಖಾ ಠಾಣೆಯಲ್ಲಿ ಮಿತಿಮೀರಿದ ಭ್ರಷ್ಟಾಚಾರವಿದೆಯೆಂದು, ಅನಾವಶ್ಯಕವಾಗಿ ವಾಹನಗಳನ್ನು ನಿಲ್ಲಿಸಿ ಚಾಲಕರಿಗೆ ತೊಂದರೆ ಕೊಡುತ್ತಿದ್ದಾರೆಂದು ಹಾಗೂ ಸರ್ಕಾರಕ್ಕೆ ಪ್ರತಿವರ್ಷ 2 ರಿಂದ 3 ಕೋಟಿ ರೂಗಳಷ್ಟು ತೆರಿಗೆ ನಷ್ಟವಾಗುತ್ತಿದೆಯೆಂದು ದೂರಿರುತ್ತಾರೆ.

ಇ) 1. ಶಾಸಕರೊಂದಿಗೆ ಅಸೌಜನ್ಯತೆಯಿಂದ ವರ್ತಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಯವರನ್ನು ಸೇವೆಯಿಂದ ಅಮಾನತ್ತುಗೊಳಿಸಿ, ಶಿಸ್ತಿನ ಕ್ರಮ ಕೈಗೊಳ್ಳಲಾಗಿದ್ದು, ಪ್ರಕರಣ ವಿಚಾರಣೆ ಹಂತದಲ್ಲಿರುತ್ತದೆ.

2. ಜಿಲ್ಲಾ ಪಂಚಾಯತ್‌ನ ಉಪಾಧ್ಯಾಕ್ಷೆಯಾದ ಶ್ರೀಮತಿ ಗೀತಾಂಜಲಿ ಹರೀಶ್ ದೇನಜಿಯವರ ಆಪಾದನೆಯನ್ನು ರಾಜ್ಯಮಟ್ಟದ ಅಧಿಕಾರಿಯವರಿಂದ ಪೂರ್ವಭಾವಿ ವಿಚಾರಣೆ ಮಾಡಿಸಿ ಆ ವರದಿಯಂತೆ, ಶಿಸ್ತು ಕ್ರಮಕ್ಕಾಗಿ ಪೂರಕ ಸಾಕ್ಷಾಧಾರಗಳಿಲ್ಲವೆಂಬ ಹಿನ್ನಲೆಯಲ್ಲಿ ಮುಕ್ತಾಯ ಮಾಡಲಾಗಿದೆ.

3. ಶಾಸಕರೊಡನೆ ಅನುಚಿತವಾಗಿ ವರ್ತಿಸಿದ ಚಿಕ್ಕಮಗಳೂರು ಜಿಲ್ಲೆ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಭಾರಿ ಉಪ ನಿರ್ದೇಶಕರ ದೂರಿಗೆ ಮೈಸೂರಿನ ವಿಭಾಗೀಯ ಸಹ ನಿರ್ದೇಶಕರಿಂದ ವರದಿಯನ್ನು ಪಡೆದಿದ್ದು ಶಿಸ್ತು ಕ್ರಮಕ್ಕೆ ಶಿಷ್ಟಾಚಾರದಲ್ಲಿ ಯಾವುದೇ ರೀತಿಯಲ್ಲಿ ಭಂಗವಾಗಿಲ್ಲವೆಂದು ತಿಳಿಸಿರುತ್ತಾರೆ.

4. ದಿನಾಂಕ: 30.03.2003 ರಂದು ಮಾನ್ಯ ಶಾಸಕರಾದ ರವಿಕಾಂತ್ ಪಾಟೀಲ್ ರವರು ಠಾಣೆಗೆ ಭೇಟಿ ನೀಡಿದ ಘಟನೆಯ ಬಗ್ಗೆ ವಿವರಣೆಯನ್ನು ಪಡೆದು, ತನಿಖಾ ಠಾಣೆಯ ನಿಯಂತ್ರಣ ಅಧಿಕಾರಿಯವರಾದ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಗುಪ್ತವಾರ್ತೆ) ಉತ್ತರ ವಲಯ, ಬೆಳಗಾವಿ ಇವರ ಅಭಿಪ್ರಾಯವನ್ನು ಪಡೆಯಲಾಗಿದೆ. ಈ ವರದಿಗಳನ್ನು ಪರಿಶೀಲಿಸಿ, ಈ ಬಗ್ಗೆ ಇಲಾಖೆಯ ಮೂಲಕ ತನಿಖೆ ನಡೆಸಲು ಉನ್ನತ ಅಧಿಕಾರಿಯವರಾದ ಅಪರ ಆಯುಕ್ತರು (ವಲಯ-1) ಇವರಿಗೆ ನಿರ್ದೇಶನ ನೀಡಲಾಗಿದೆ. ತನಿಖೆಯ ವರದಿಯು ಬಂದ ಕೂಡಲೇ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಖೋಟಾ ನೋಟು ಚಲಾವಣೆಯ ಭಾರಿ ಜಾಲ ಪತ್ತೆಯಾಗಿರುವುದು

2675 (3189) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖೋಟಾ ನೋಟು ಚಲಾವಣೆಯ ಭಾರಿ ಜಾಲ ಇತ್ತೀಚೆಗೆ ಪತ್ತೆ ಯಾಗಿದೆಯೇ;

ಆ) ಯಾವ ಯಾವ ಜಿಲ್ಲೆಗಳಲ್ಲಿ ಈ ಜಾಲ ಪತ್ತೆಯಾಗಿದೆ.